Review Of Research
Vol. 3 | Issue. 8 | May. 2014
Impact Factor : 2.1002 (UIF)
ISSN:-2249-894X
Available online at www.lbp.world

ORIGINAL ARTICLE

# ಗುಲ್ಬರ್ಗಾ ಜಿಲ್ಲೆಯ ಕಲಾವಿದರು – ಒಂದು ನೋಟ

**ಸಂಶೋಧಕರು**
ಶ್ರೀಮತಿ. ರೇಣುಕಾ ಹಾಗರಗುಂಡಗಿ , ಉಪನ್ಯಾಸಕರು ಸಂಗೀತ ವಿಭಾಗ ,
ಶ್ರೀಮತಿ. ವಿ.ಜಿ ಪದವಿ ಮಹಿಳಾ ಮಹಾವಿದ್ಯಾಲಯ ಗುಲ್ಬರ್ಗಾ.

ಶ್ರೀ ಶರಣಬಸವೇಶ್ವರರು, ಖಾಜಾ ಬಂದೇನವಾಜರು ಇನ್ನೂ ಅನೇಕ ಶರಣರು ನಡೆದಾಡಿದ ಪುಣ್ಯಭೂಮಿ ಗುಲ್ಬರ್ಗಾ. ಇಂಥ ಜಿಲ್ಲೆಯಲ್ಲಿ ಅನೇಕ ಜನ ಸಂಗೀತಗಾರರು ತಮ್ಮ ಗಾಯನದಿಂದ, ವಾದನದಿಂದ ಸಾಂಸ್ಕೃತಿಕ ಲೋಕದಲ್ಲಿ ಗುಲ್ಬರ್ಗಾದ ಹಿರಿಮೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಕೇಳಿಬರುವಂತೆ ಮಾಡಿದ್ದಾರೆ. ಅಂಥ ಕೆಲವು ಗಾಯಕರ ಮತ್ತು ವಾದಕರ ಕುರಿತು ಒಂದು ಇಣುಕು ನೋಟ ಇಲ್ಲಿದೆ.

ಸಂಗೀತದಲ್ಲಿ ಅನೇಕ ಪ್ರಕಾರಗಳನ್ನು ನೋಡುತ್ತೇವೆ. ಅವುಗಳಲ್ಲಿ ಶಾಸ್ತ್ರೀಯ ಸಂಗೀತ ಕುರಿತು ಹೇಳುವುದಾದರೆ ಶ್ರೀಮತಿ ಸರೋಜ ಅನಗರಕರ, ಡಾ.ಪಾಂಡುರಂಗರಾವ ಪದಕಿ, ಶ್ರೀಮತಿ ತಾರಾಬಾಯಿ ಕುಲಕರ್ಣಿ, ಡಾ.ಹನುಮಣ್ಣ ನಾಯಕ ದೊರೆ, ಶ್ರೀ ಸಿದ್ರಾಮಪ್ಪ ತಪಲೆ, ಶ್ರೀ ರೇವಯ್ಯ ವಸ್ತ್ರದ ಮಠ, ಶ್ರೀ ಸಿದ್ಧರಾಮಪ್ಪ ಪೊಲೀಸ ಪಾಟೀಲ ಕುಕನೂರ, ಶ್ರೀ ಮಹೇಶ ಕುಮಾರ ಬಡಿಗೇರ ಹೀಗೆ ಹತ್ತು ಹಲವು ಗಾಯಕರನ್ನು ನೋಡುತ್ತೇವೆ. ಹಾಗೆ ಸುಗಮ ಸಂಗೀತಕ್ಕೆ ಭಕ್ತಸಂಗೀತಕ್ಕೆ ಹೆಸರು ಮಾಡಿದ ಕಲಾವಿದರುಗಳನ್ನು ನೋಡಬಹುದು. ಡಾ.ಛಾಯಾ ಭರತನೂರ, ಡಾ.ಕಲಾವತಿ ದೋರೆ, ಶ್ರೀಮತಿ ಶಾರದಾ ಜಂಬಲದಿನ್ನಿ, ಡಾ. ರೇಣುಕಾ ಹಾಗರಗುಂಡಗಿ ಮುಂತಾದವರನ್ನು ಇಲ್ಲಿ ಸ್ಮರಿಸುತ್ತೇನೆ. ಅದೇ ರೀತಿ ಗಾಯನ ಕ್ಷೇತ್ರವಲ್ಲದೆ ತಬಲಾ ವಾದನಕ್ಕೆ ಇಡೀ ತಮ್ಮ ಕುಟುಂಬವೇ ಸಮರ್ಪಿಸಿಕೊಂಡ ದೇಸಾಯಿ ಕಲ್ಲೂರ ಮನೆತನದ ಕೊಡುಗೆ ಅಪಾರ ಮತ್ತು ಅಜರಾಮರ. ಗುಲ್ಬರ್ಗಾದ ಹೆಸರು ವಿದೇಶಗಳಲ್ಲಿ ಬರುವಂತೆ ಮಾಡಿದ ಹೆಗ್ಗಳಿಕೆಗೆ ಪಾತ್ರವಾದ ದೇಸಾಯಿ ಕಲ್ಲೂರ ಕುಟುಂಬದ ಕುಡಿಗಳು ಗಾಯನದಲ್ಲೂ ಈಗ ಮುಂಚೂಣಿಯಲ್ಲಿದ್ದಾರೆ. ಇಂಥ ಅದ್ಭುತ ಕುಟುಂಬದ ಕಲಾವಿದರು ತಮ್ಮದೆ ಆದ ಘರಾಣೆಯನ್ನು ಅಥವಾ ಹುಟ್ಟು ಹಾಕುವಂಥಾ ಸಾಮರ್ಥ್ಯ ಹೊಂದಿದ್ದಾರೆ. ಶ್ರೀ ಭಗವಂತಪ್ಪ ಹೂಗಾರ, ಶ್ರೀ ಶಿವಣ್ಣ ಹೂಗಾರ, ಶ್ರೀ ಸಿದ್ದಣ್ಣ ಹೂಗಾರ, ಶ್ರೀ ಶಾಂತಲಿಂಗ ಹೂಗಾರ ದೇಸಾಯಿ ಕಲ್ಲೂರ ಹೀಗೆ ತಮ್ಮ ತಂದೆಯಿಂದ ಜ್ಞಾನ ಪಡೆದು ಒಂದು ಭವ್ಯ ಪರಂಪರೆಯನ್ನು ಹುಟ್ಟು ಹಾಕಿದ್ದಾರೆ.

ಶ್ರೀ ಸಿದ್ರಾಮಪ್ಪ ಪೋಲಿಸ ಪಾಟೀಲ ಕುಕನೂರ ಅಂಧ ಕಲಾವಿದರಾದರೂ ಕಣ್ಣಿದ್ದವರಿಗೆ ಮಾರ್ಗದರ್ಶಕರಾಗಿದ್ದಾರೆ. ತಮ್ಮ ಕೊರತೆಯನ್ನು ಎಲ್ಲೂ ತೋರಿಸದೆ ಎಲ್ಲರೊಂದಿಗೆ ನಾನು ಒಬ್ಬ ಎಂಬ ಪಟ್ಟ ನಡ ಅವರದು. ಅವರು ಹಾಡಲು ಕುಳಿತರೆ ಸಾಕು. ಲೀಲಾಜಾಲವಾಗಿ ಮೂರು ಸಪ್ತಕಗಳಲ್ಲಿ ಹಾಡುತ್ತಾ ತಾನಗಳಲ್ಲಿ ವೈವಿಧ್ಯತೆ ತೋರಿಸುತ್ತ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುವ ಸಾಮರ್ಥ್ಯವುಳ್ಳ ಶ್ರೇಷ್ಠ ಸಂಗೀತಗಾರ. ತತ್ವಪದ, ವಚನ, ದಾಸರ ಪದ ಭಾವಗೀತೆಗಳನ್ನು ಹಾಡುತ್ತಾ ತಮ್ಮ ಜೀವನದ ಸಾರ್ಥಕತೆಯನ್ನು ಮೆರೆಯುತ್ತಿದ್ದಾರೆ. ಅನೇಕ ಮಕ್ಕಳಿಗೆ ಸಂಗೀತ ಪಾಠ ಹೇಳಿಕೊಡುವ ಮುಖಾಂತರ ಜನರ ಮನಗೆದಿದ್ದಾರೆ.

ಗುಲ್ಬರ್ಗಾದ ಇನ್ನೊಂದು ಅನರ್ಘ್ಯ ರತ್ನ ಶ್ರೀ ರೇವಯ್ಯ ವಸ್ತ್ರದ ಮಠ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ ರೇವಯ್ಯ ವಸ್ತ್ರದ ಮಠ ಅವರು ತಮ್ಮ ಉನ್ನತ ಸಂಗೀತ ಅಭ್ಯಾಸ ಪಂ.ಬಸವರಾಜ ರಾಜಗುರುಗಳ ಹತ್ತಿರ ಕಲಿತು ಧಾರವಾಡದೊಂದಿಗೆ ಅತ್ಯಂತ ನಿಕಟ ಸಂಪರ್ಕವನ್ನು ಇಟ್ಟುಕೊಂಡ ಹಿರಿಯ ಕಲಾವಿದ. ಇವರು ಗಾಯನದೊಂದಿಗೆ ಹಾರ್ಮೋನಿಯಂ ಸೀತಾರ, ತಬಲಾ ಮತ್ತು ಒಳ್ಳೆಯ ಸ್ವರಸಂಯೋಜಕರಾಗಿದ್ದಾರೆ. ಸದಾ ಶಾಸ್ತ್ರೀಯ ಸಂಗೀತವನ್ನು ಹಾಡುತ್ತಾ ಸಂಗೀತ ಲೋಕದ ನಾದಬ್ರಹ್ಮವಾಗಿದ್ದಾರೆ. ಇವರು ಸ್ವರಗಳನ್ನು,

Review Of Research
Vol. 3 | Issue. 8 | May. 2014
Impact Factor : 2.1002 (UIF)
ISSN:-2249-894X
Available online at www.lbp.world

ಆಲಾಪಗಳನ್ನು ತಾನಗಳನ್ನು ಸ್ವರದಿಂದ ಸ್ವರಕ್ಕೆ ಏರಿಸುತ್ತಾ ರಾಗದ ಛಾಯೆಯನ್ನು ಎತ್ತಿ ತೋರಿಸುತ್ತಾರೆ. “ನಿರಂತರ ಅಭ್ಯಾಸವಿಲ್ಲದೆ ಇರುವುದು ಸಂಗೀತಗಾರರ ಲಕ್ಷಣ ಅಲ್ಲ ಎಂದು ಹೇಳುತ್ತಲೇ ನಮಗೆ ಒಂದು ದಿನ ಅಭ್ಯಾಸ ಬಿಟ್ಟರೆ ಏನೋ ಕಳೆದುಕೊಂಡ ಭಾಸ ಆಗುತ್ತೆ ಅಂತ ಹೇಳುತ್ತಾರೆ.” ಇವರು ಸಂಯೋಜಿಸಿದ ಹಾಡುಗಳು ತುಂಬಾ ಕ್ಲಿಷ್ಟವಾಗಿರುತ್ತವೆ. ಆ ಹಾಡುಗಳು ಹಾಡಬೇಕೆಂದರೆ ದೇವರ ದೇಣಿಗೆ ಮತ್ತು ಸತತ ಅಭ್ಯಾಸ ಇರುವವರಿಗೆ ಸಾಧ್ಯ. ಭಾವಗೀತೆಗಳು ವಚನಗಳು, ದೇಶಭಕ್ತಿಗೀತೆ, ತತ್ವಪದಗಳು ತುಂಬಾ ವಿಭಿನ್ನ ರೀತಿಯಲ್ಲಿ ಹಾಡುವ ಕಲಾವಿದ ಇವರಾಗಿದ್ದಾರೆ. ಮುಂದೆ ತಮ್ಮ ಮಕ್ಕಳಿಗೆ ಸಂಗೀತ ಕಲಿಸುವ ಮುಖಾಂತರ ಸದ್ಯ ಶರಣಬಸವೇಶ್ವರರ ವಿದ್ಯಾ ಸಂಸ್ಥೆಯ ಗೋದುತಾಯಿ ಪದವಿ ಮಹಾವಿದ್ಯಾಲಯದಲ್ಲಿ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಮಕ್ಕಳಿಗೆ ಪಾಠ ಮಾಡುವ ಮುಖಾಂತರ ಸರಸ್ವತಿಯ ಸೇವೆಯನ್ನು ಮಾಡುತ್ತಿದ್ದಾರೆ.

ಯುವ ಸಂಗೀತಗಾರರಲ್ಲಿ ಅತ್ಯಂತ ಸುಮಧುರವಾಗಿ ಹಾಡುವ ಮತ್ತು ಗುಲ್ಬರ್ಗಾದ ಮಕ್ಕಳಿಗೆ ದೊಡ್ಡವರಿಗೆ ಎಲ್ಲರಿಗೂ ಸಂಗೀತ ತರಬೇತಿದಾರನಾಗಿ ಮನೆ ಮನೆಯಲ್ಲಿರೊ ಸಂಗೀತ ಶಾರದೆ ರಾರಾಜಿಸಬೇಕು ಎಂಬ ನಿಟ್ಟಿನಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಕೆಲಸ ಮಾಡುವ ಗಾಯಕ ಶ್ರೀ ಮಹೇಶ ಕುಮಾರ ಬಡಿಗೇರ. ಇವರ ಗಾಯನಕ್ಕೆ ಬೆರಗಾಗದ ವ್ಯಕ್ತಿಗಳಿಲ್ಲ. ವಚನಗಳು, ದಾಸರ ಪದಗಳು ಲೀಲಾಜಾಲವಾಗಿ ಹಾಡುವಂಥ ಬಡಿಗೇರ ಒಬ್ಬ ಒಳ್ಳೆಯ ಶಿಕ್ಷಕ ಒಬ್ಬ ಒಳ್ಳೆಯ ಸಂಘಟನಾಕಾರ, ತಾನು ಬೆಳೆಯುವದರೊಂದಿಗೆ ತನ್ನೊಂದಿಗಿರುವವರನ್ನು ಬೆಳೆಸುತ್ತಾ ಹೋಗುವ ಕಲಾವಿದ. ಸದ್ಯ ನೂತನ ವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹೀಗೆ ಗುಲ್ಬರ್ಗಾ ಸಂಗೀತಗಾರರ ಸಂಗಮವೇ ಆಗಿದೆ.